ಎರಡು ಕಡೆ ಇದೆ. ಮೊದಲನೆಯದು – ಹಳೆಯ ಸಾಮಾನ್ಯ ಸಮಸ್ಯೆ. ಕನ್ನಡ ಅಂದರೆ ಏನು ಎಂಬ ತಾತ್ಸಾರ. ಒಂದು ಸಲ ನನಗೆ ಒಂದು ಪತ್ರ ಬಂತು ಅಮೆರಿಕಾ ಹೌಸ್‌ನಿಂದ. ಅದರಲ್ಲಿ 'ನೀವು ಕೆನಡಾ ಸಾಹಿತ್ಯದ ಬಗ್ಗೆ ತಜ್ಞರಾಗಿರುವುದರಿಂದ, ನಮ್ಮ ಕೆಲಸದ ಬಗ್ಗೆ ಆಸಕ್ತಿ ಇರಬಹುದು. ದಯವಿಟ್ಟು ನಮ್ಮ ಬ್ರೋಶರ್ ಸ್ವೀಕಾರ ಮಾಡಿ' ಅಂತ ಇತ್ತು. ಕರ್ನಾಟಕ ಎಂಬ ರಾಜ್ಯ ಉಂಟು, ಕನ್ನಡ ಭಾಷೆ ಉಂಟು, ಕನ್ನಡ ಸಾಹಿತ್ಯ ಉಂಟು. ಕೆನಡಾದಲ್ಲಿ ಹುಟ್ಟಿದ ರೊಬರ್ಟ್ ಕನ್ನಡ ಕಲಿಸ್ತಾನೆ ಅಂದರೆ ಯಾರಿಗೂ ಅರ್ಥವಾಗುವುದಿಲ್ಲ. ಕನ್ನಡಕ್ಕೆ ವಿಸಿಬಿಲಿಟಿ ಇಲ್ಲ. ಎರಡನೆಯದು – ಪ್ರಚಾರವಿಲ್ಲ. 2006ರಲ್ಲಿ ಫ್ರಾಂಕ್‌ಫರ್ಟ್‌ನಲ್ಲಿ ಒಂದು ಪುಸ್ತಕಮೇಳ ನಡೆಯಿತು. ಅಲ್ಲಿ ಪ್ರತಿವರ್ಷ ಯಾವುದಾದರೂ ಒಂದು ದೇಶದ ಸಾಹಿತ್ಯ ಬಗ್ಗೆ ಗಮನ ಸೆಳೆಯುವ ಕಾರ್ಯಕ್ರಮ ಮಾಡುತ್ತಾರೆ. 2006ರಲ್ಲಿ ಅದು ಇಂಡಿಯಾ ಆಗಿತ್ತು. 25 ಲೇಖಕರನ್ನು ಆಹ್ವಾನಿಸಿದ್ದರು. ಕನ್ನಡದಿಂದ ರಾಮಾನುಜನ್, ಅನಂತಮೂರ್ತಿ ಬಂದಿದ್ದರು. ಬೇರೆಬೇರೆ ಭಾಷೆಯ ಲೇಖಕರು ತಮ್ಮ ಸ್ವಂತ ಕೃತಿಗಳ ವಾಚನ ಮಾಡಿದರು. ಚರ್ಚೆ ನಡೆಯಿತು. ಕನ್ನಡ ಲೇಖಕರು ಆಮೇಲೆ ಜರ್ಮನಿಯಲ್ಲಿ ಸ್ವಲ್ಪ ಟೂರ್ ಮಾಡಿದರು. ಬೇರೆ ಊರುಗಳಲ್ಲಿ ಭಾಷಣ ನೀಡಿದರು. ಅನಂತಮೂರ್ತಿ ಅವರಿಗೆ ಹೊರಗಿನ ಜನರಿಗೆ ಎಷ್ಟು ಗೊತ್ತು, ಎಂತಹ ಆಸಕ್ತಿಗಳಿವೆ, ಹೇಗೆ ಪ್ರೆಸ್ ಜೊತೆ ಮಾತಾಡಬೇಕು ಅಂತ ಚೆನ್ನಾಗಿ ಗೊತ್ತು. ಕನ್ನಡಕ್ಕೆ ಒಳ್ಳೆಯ ಚಾರ್ಮ್ ಆಗಿದ್ದರು ಅವರು. ಇದು ಸ್ವಲ್ಪಕಾಲ, 'ಏನಿದು ಕನ್ನಡ? ಇದರಲ್ಲಿ ಆಸಕ್ತಿಕರವಾದ ಲೇಖಕರು ಬರೀತಾರೆ' ಎಂದು ಕುತೂಹಲ ಹುಟ್ಟಿಸಿತು. ಆದರೆ, ಕುತೂಹಲ ಬಹಳ ಕಾಲ ಉಳಿಯಲಿಲ್ಲ.

◆ ಸಮಸ್ಯೆಯ ಮೂಲ ಯೂರೋಪಿನ ಸಂಸ್ಥೆಗಳಲ್ಲೂ ಇದೆಯಾ?

ಇದೆ. ಇಂಡಿಯಾದಲ್ಲಿ ಅಷ್ಟೊಂದು ಭಾಷೆಗಳಿವೆ. ಅವಕ್ಕೆ ಹೋಲಿಸಿದರೆ ಇಲ್ಲಿನ ಇಂಡೋಲಾಜಿಕಲ್ ಸಂಸ್ಥೆಗಳು ಬಹಳ ಚಿಕ್ಕವು. ನಮ್ಮ ರಿಸೋರ್ಸ್ ತುಂಬಾ ಸೀಮಿತ. ಇಲ್ಲಿ ಕನ್ನಡ, ಉರ್ದು, ತೆಲುಗು, ಹಿಂದಿ, ಬೆಂಗಾಲಿ, ತಮಿಳು–ಆರು ಆಧುನಿಕ ಭಾಷೆಗಳನ್ನು ಕಲೀಬಹುದು. ಆದರೆ, ಇದಕ್ಕೆ ಮಿತಿ ಇದೆ. ಆಧುನಿಕ ಭಾಷೆಗಳಿಗೆ ನಾವಿಬ್ಬರೇ ಇದ್ದೀವಿ. ಗ್ರಂಥಾಲಯಕ್ಕೆ ಹೊಸ ಪುಸ್ತಕ ಕೊಂಡುಕೊಳ್ಳುವುದಕ್ಕೆ ಅಷ್ಟು ಹಣವಿಲ್ಲ. ಆದರೆ, ಯಾರೊಬ್ಬರು ಚೈನಿಸ್–ಜಪಾನಿಸ್ ಅಧ್ಯಯನ ಮಾಡಿದರೆ ತುಂಬಾ ಸಲೀಸಾಗಿ ಚೈನಾಗೆ ಜಪಾನಿಗೆ ಹೋಗಿ ಅಧ್ಯಯನ ಮುಂದುವರೆಸಬಹುದು. ಹಿಂದೆ ವಿದ್ಯಾರ್ಥಿ ಜಪಾನ್‌ಗೆ ಹೋಗಬೇಕಾದರೆ ಜಪಾನಿ ಸರ್ಕಾರ ಪ್ರಯಾಣದ ಖರ್ಚು ಕೊಡುತ್ತಿತ್ತು. ಆದರೆ, ಕನ್ನಡ ಅಧ್ಯಯನಗಳಿಗೆ ಈ ಯಾವ ಪ್ರೋತ್ಸಾಹಗಳೂ ಸಿಗುವುದಿಲ್ಲ. ಸೊನ್ನೆ. ಅಂದರೆ ಬಯಲು.

◆ ನೀವು ಬೆಂಬಲ ಪಡೆಯಲು ಏನಾದರೂ ಪ್ರಯತ್ನ ಮಾಡಿದಿರಾ?

ಮಾಡಿದೆ. 2011ರಲ್ಲಿ ನಾನು ಅಕಸ್ಮಾತ್ತಾಗಿ ಬೆಂಗಳೂರಿನಲ್ಲಿದ್ದೆ. ಅಲ್ಲಿ ಒಬ್ಬ ಸ್ನೇಹಿತರು ಹೇಳಿದರು, 'ಕರ್ನಾಟಕ ಸರ್ಕಾರದವರಲ್ಲಿ ಯೂರೋಪಿನ ಕನ್ನಡ ಅಧ್ಯಯನಗಳಿಗೆ ಆರ್ಥಿಕ ಬೆಂಬಲ ಕೊಡಬೇಕು ಎನ್ನುವ ಯೋಜನೆ ಇದೆ. ಆದರೆ, ಯಾವ ವಿಶ್ವವಿದ್ಯಾಲಯಕ್ಕೆ ಬೆಂಬಲ ಕೊಡಬೇಕೆಂದು ಇನ್ನೂ ತೀರ್ಮಾನವಾಗಿಲ್ಲ'. ಹಾಗಾದರೆ ವಿಧಾನಸೌಧಕ್ಕೆ ಹೋಗಿ ಯಾರನ್ನಾದರೂ ಮಾತನಾಡಿಸಬೇಕು. ಆವಾಗ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಮುಖ್ಯಮಂತ್ರಿ ಚಂದ್ರು ಇದ್ದರು. ಅವರ ಹತ್ತಿರ ಹೋಗಿ ವಿಚಾರಿಸಿದೆ. ಅವರು, 'ಹೈಡಲ್‌ಬರ್ಗ್, ವ್ಯೂರ್‌ಬರ್ಗ್, ವಿಯೆನ್ನಾ ಹೀಗೆ ಯೋಚನೆ ಮಾಡುತ್ತಿದ್ದೀವಿ' ಅಂದರು. ನಾನು ಹೇಳಿದೆ, 'ಹೈಡಲ್‌ಬರ್ಗ್‌ನಲ್ಲಿ ಯಾರೂ ಇಲ್ಲ. ವ್ಯೂರ್‌ಬರ್ಗ್‌ನಲ್ಲಿ ತೋರಿಕೆಗೆ ಕನ್ನಡ ಅಧ್ಯಯನ ಮಾಡುತ್ತಾರೆ. ಕನ್ನಡದ ಬಗ್ಗೆ ಹೆಚ್ಚು ತಿಳಿವಳಿಕೆ